ಸಾಕ್ಷಿಯ ಹೆಸರುಃ ಸಿ ಎಸ್ ರವಿ

ದಿನಾಂಕಃ **28-07-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎ ಎಸ್ ವಿ ವಕೀಲರಿಂದ ಃ**

1) ನಾನು ಮನೆ ಕಟ್ಟುವ ಮುನ್ನ ಬನ್ನಿ ಮಂಟಪ ಬಡಾವಣೆಯಲ್ಲಿ ವಾಸವಾಗಿದ್ದೆ. ನಾನು ಮನೆ ಕಟ್ಟಲು ನಿವೇಶನವನ್ನು ಮಹೇಶ್ ಬಿನ್ ಮಹದೇವ್ ಮಂಚನಹಳ್ಳಿರವರಿಂದ ಕೊಂಡಿರುತ್ತೇನೆ. ಸೌದೆ ಡಿಪೋ ಕೆಳಗಡೆ ಬನ್ನಿಮಂಟಪ ಬಡಾವಣೆ ಬರುತ್ತದೆ. ಹೌಸಿಂಗ್ ಬೋರ್ಡ್ ವಿನಾಯಕ ಬಡಾವಣೆ ಹತ್ತಿರ ಬರುತ್ತದೆ. ಮಹೇಶ್ ರವರು ಪದ್ಮಾವತಿ ಎಂಬುವವರಿಂದ ಕೊಂಡಿದ್ದರು. ಮಹೇಶ್ ರವರು ಅವರಿಗೆ ಪದ್ಮಾವತಿಯವರಿಂದ ಮಾಡಿಕೊಂಡ ಕ್ರಯ ಪತ್ರವನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನನ್ನ ಬಳಿ ಇದ್ದು ಬೇಕಾದರೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ನಾನು ಮಹೇಶ್ ರವರಿಂದ ಕೊಂಡ ಕ್ರಯ ಪತ್ರದಲ್ಲಿ ನನ್ನ ವಿಳಾಸ ಹೌಸಿಂಗ್ ಬೋರ್ಡ್ನಲ್ಲಿ ವಾಸವಾಗಿದ್ದೆ ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿ ಬನ್ನಿಮಂಟಪ ಬಡಾವಣೆಯಲ್ಲಿ ಬೋಗ್ಯಕ್ಕೆ ಪಡೆದು ವಾಸವಾಗಿದ್ದೆ ಎನ್ನುತ್ತಾರೆ. ಸೈಟ್ ನಂ.18 ರಲ್ಲಿ ಕಟ್ಟಿಸಿರುವ ಮನೆಯಲ್ಲಿ ವಾಸವಾಗಿದ್ದೆ. ಸದರೀ ಮಂಚನಹಳ್ಳಿಯ ಗುರುಪ್ರಸಾದ್ ಬಿನ್ ಸಜ್ಜೆ ಶಿವಣ್ಣ ರವರ ಸೇರಿದ್ದು.

2) ಸೈಟ್ ನಂ.16, 4 ನೇ ಅಡ್ಡ ರಸ್ತೆಯಲ್ಲಿ ಬರುತ್ತದೆ. ಈ ಅಡ್ಡ ರಸ್ತೆಯಲ್ಲಿ ಮೂರು ಮನೆಗಳು ಇವೆ. ಸಾಕ್ಷಿ ಈಗ ನಿಡಿ 1 ಪೋಟೋವನ್ನು ತೋರಿಸಿ ಅದರಲ್ಲಿ ನೀವು ನಿಂತಿರುವ ಮನೆ ನಿಮ್ಮದೇ ಎಂದರೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ನಮ್ಮ ಮನೆಯ ಹಿಂಭಾಗದಲ್ಲಿ ಸೈಟ್ ನಂ.09 ಇದೆ. ನಮ್ಮ ಸೈಟ್ ನಂ.16 ರ ಚೆಕ್ಕುಬಂದಿ ಹೇಳಲು ಬರುತ್ತದೆ. ಪೂರ್ವಕ್ಕೆ ಸೈಟ್ ನಂ.9, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸೈಟ್ ನಂ.15, ದಕ್ಷಿಣಕ್ಕೆ ಸೈಟ್ ನಂ.17 ಬರುತ್ತದೆ. ನಮ್ಮ ಮನೆಯ ಹಿಂಭಾಗದಲ್ಲಿ ನಮ್ಮ ಮನೆ ಆದ ತಕ್ಷಣವೇ

ಉದ್ಯಾನವನ ಇದೆ ಸಾಕ್ಷಿ ನಿವೇಶನ ಸಂಖ್ಯೆ 09 ಇದೆ ಎನ್ನುತ್ತಾರೆ. ನಿವೇಶನ ಸಂಖ್ಯೆ 09 ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ಅದು ಖಾಲಿ ನಿವೇಶನವಾಗಿದೆ.

3) ನಮ್ಮ ಮನೆ 8 ನೇ ಲೈನ್ ನಲ್ಲಿ ಇದೆ. ಪಿ ಎಲ್ ಡಿ ಬ್ಯಾಂಕಿನಿಂದ ಬರುವ ಮುಖ್ಯ ರಸ್ತೆಯಲ್ಲಿ 7-8 ಅಡ್ಡ ರಸ್ತೆಗಳು ಇವೆ. ನಮ್ಮ ಮನೆಯ ಉತ್ತರ ದಿಕ್ಕಿಗೆ ಮುಖ್ಯ ಬಾಗಿಲು ಇಟ್ಟುಕೊಂಡಿರುತ್ತೇವೆ. ನಾನು ಮನೆ ಕಟ್ಟಿರುವ ಜಾಗ ವಾದಿಗೆ ಸೇರಿದೆ ಎಂದರೆ ಸರಿಯಲ್ಲ. ನನ್ನ ಜಾಗ ಕೆಳಗಡೆ 3 ನೇ ರಸ್ತೆಯಲ್ಲಿ ಇದೆ ಎಂದರೆ ಸರಿಯಲ್ಲ. ನಾನು ಕಟ್ಟಡ ಕಟ್ಟಲು ಅನುಮತಿಯನ್ನು ಸೈಟ್ ಸಂಖ್ಯೆ 16 ಕ್ಕೆ ಪಡೆದಿದ್ದು ಅಲ್ಲೇ ಮನೆ ಕಟ್ಟಿರುತ್ತೇನೆ. ನಾನು ನಿವೇಶನ ಸಂಖ್ಯೆ 26 ಮತ್ತು 28 ರಲ್ಲಿ ಮನೆ ಕಟ್ಟಿಸಿಕೊಂಡಿರುವುದಿಲ್ಲ. ನನ್ನ ಸೈಟಿನ ಪೂರ್ವಕ್ಕೆ ಸೈಟ್ ನಂ. 9 ಮತ್ತು ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ಸರಿ.

4) ನಾನು 2013-14 ರಲ್ಲಿ ಮನೆ ಕಟ್ಟಲು ಪರವಾನಗಿ ಪಡೆದಿದ್ದೆ. ಒಂದು ವರ್ಷಗಳ ಕಾಲ ಕಟ್ಟಡ ಕಟ್ಟಲು ತಗುಲಿತ್ತು. 2015 ರಲ್ಲಿ ಗೃಹ ಪ್ರವೇಶ ಮಾಡಿರುತ್ತೇನೆ. ನಾನು ಮನೆ ಕಟ್ಟುವಾಗ ಈ ಜಾಗ ನಿಮ್ಮದಲ್ಲ ಹಾಗೂ ನನ್ನದು ಎಂದು ವಾದಿ ಹಲವಾರು ಸಾರಿ ಬಂದು ಹೇಳಿದ್ದರು ಎಂದರೆ ಸರಿಯಲ್ಲ. ನನ್ನ ನಿವೇಶನ ತಗ್ಗು ಪ್ರದೇಶದಲ್ಲಿ ಇದ್ದು ಅದನ್ನು ಬಿಟ್ಟು ಚೆನ್ನಾಗಿರುವ 26, 27 ನೇ ಸೈಟಿಗೆ ಬಂದು ಮನೆ ಕಟ್ಟಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಹಿಂಭಾಗದಲ್ಲಿ ಸಾರ್ವಜನಿಕ ಉದ್ಯಾನವನ ಇದೆ ಎಂದರೆ ಸೈಟ್ ನಂ. 09 ಇದ್ದು ನಂತರ ಪಾರ್ಕ್ ಇದೆ ಎನ್ನುತ್ತಾರೆ. ನಮ್ಮ ಮನೆಯ ಹಿಂಭಾಗದಲ್ಲಿ ನಿವೇಶನ ಸಂಖ್ಯೆ 09 ಇಲ್ಲ, ಪಾರ್ಕ್ ಇದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪಕ್ಕದಲ್ಲಿ ಅಂದರೆ ನಿವೇಶನ ಸಂಖ್ಯೆ 16 ರಲ್ಲಿ ಸವಿತಾ ಪಾಲಾಕ್ಷ ಎಂಬುವವರ ಮನೆ ಇದೆ.

5) ನಿಡಿ 1 ರ ಕೊನೆಯ ಭಾಗದಲ್ಲಿ ಒಂದು ಗಿಡ ಮತ್ತು ಕಾರು ನಿಲ್ಲಿಸುವ ಸ್ಥಳ ಇದ್ದು ಅದರಲ್ಲಿ ನಾವು ಕಾರನ್ನು ನಿಲ್ಲಿಸಿಕೊಳ್ಳುತ್ತೇವೆ ನಂತರ ಓಡಾಡಲು ಜಾಗ ಇರುವುದಿಲ್ಲ. ನಾನು ಕಟ್ಟಿರುವ ಮನೆ 1 ನೇ ಕ್ರಾಸ್ ನಲ್ಲಿ ಇದ್ದು, ಅದನ್ನು ನಾನು 4 ನೇ ಕ್ರಾಸ್ ನಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿವೇಶನ ಸಂಖ್ಯೆ 15 ಕ್ಕೆ ಸಂಬಂಧಿಸಿದಂತೆ

ಇದೇ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿದೆ ಎಂದರೆ ಸರಿ. ನಾನು ಮತ್ತು ಮಂಜುಳಾ ಷಾಮೀಲಾಗಿ ನಮ್ಮ ಸೈಟುಗಳು ಹಳ್ಳದಲ್ಲಿ ಬಂದಿದ್ದರಿಂದ ಈ ಜಾಗ ಚೆನ್ನಾಗಿದೆ ಎಂದು ತಿಳಿದು ಬೇರೆ ಜಾಗದಲ್ಲಿ ಮನೆ ಕಟ್ಟಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿವೇಶನ ಸಂಖ್ಯೆ 128 ಕ್ಕೂ ನಮಗೂ ಸಂಬಂಧ ಇಲ್ಲ ಎಂದರೆ ಸರಿ. ನಿವೇಶನ ಸಂಖ್ಯೆ 128 ರ ಚೆಕ್ಕುಬಂದಿಗೂ ನಮಗೂ ಸಂಬಂಧ ಇಲ್ಲ ಎಂದರೆ ಸರಿ. ಅದೇ ರೀತಿ ನಿವೇಶನ ಸಂಖ್ಯೆ 126 ಕ್ಕೂ ನಮಗೂ ಸಂಬಂಧ ಇಲ್ಲ ಎಂದರೆ ಸರಿ. ನಿವೇಶನ ಸಂಖ್ಯೆ 126 ರ ಚೆಕ್ಕುಬಂದಿಗೂ ನಮಗೂ ಸಂಬಂಧ ಇಲ್ಲ ಎಂದರೆ ಸರಿ. ಕಳೆದ 12 ವರ್ಷಗಳಿಂದ ಬನ್ನಿ ಮಂಟಪ ಬಡಾವಣೆಯಲ್ಲಿ ವಾಸವಾಗಿರುತ್ತೇನೆ.

6) ನಾನು ವಾಸವಾಗುವ ಮುನ್ನವೇ ಬನ್ನಿಮಂಟಪ ಬಡಾವಣೆ ಆಗಿತ್ತು. ಅಲ್ಲಿ ಈಗಲೂ ಸೌದೆ ಡಿಪೊ ಮತ್ತು ಫಾರೆಸ್ಟ್ ಆಫೀಸ್ ಇದೆ. ಅವು ನಮ್ಮ ಮನೆಯ ಹಿಂಭಾಗದಲ್ಲಿ ಅಂದರೆ ಪೂರ್ವ ದಿಕ್ಕಿಗೆ ಇವೆ. ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ರಾಗ್ ಪ್ಲೇಸ್ ನಲ್ಲಿ ಬಂದು ಮನೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನಗೆ ನಿವೇಶನ ಮಾರಾಟ ಮಾಡಿದ ಮಹೇಶ್ ರವರಿಗೂ ಮತ್ತು ನಾನು ಮನೆ ಕಟ್ಟಿರುವ ಸ್ಥಳಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿ ಬೇರೆ ಊರಿನಲ್ಲಿ ವಾಸವಾಗಿದ್ದಾರೆ ಎಂಬ ಕಾರಣದಿಂದ ಅದನ್ನು ದುರುಪಯೋಗಪಡಿಸಿಕೊಂಡ ಅವರ ನಿವೇಶನದಲ್ಲಿ ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿವೇಶನ ಸಂಖ್ಯೆ 16 ಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ಸಾಲ ಮತ್ತು ಅನುಮತಿ ಪಡೆದಿರುತ್ತೇನೆ. ಈ ದಾವೆಯ ಕೋರಿಕೆಯಂತೆ ಮನೆ ಹೊಡೆದು ಹಾಕಲು ಆದೇಶಿಸಿದರೆ ತೊಂದರೆ ಆಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.